# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 228

2) ಸದಸ್ಯರ ಹೆಸರು : ಶ್ರೀ ಕೆ.ಹರೀಶ್ ಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು)

3) ಉತ್ತರಿಸಬೇಕಾದ ದಿನಾಂಕ : 06-12-2023

4) ಉತ್ತರಿಸಬೇಕಾದ ಸಚಿವರು : ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಸಮೃದ್ಧ ಮೀನುಗಾರಿಕೆ ನಡೆಸುವ ನಿಟ್ಟಿನಲ್ಲಿ ಆಧುನಿಕ ತಂತ್ರಜ್ಞಾನ ಬಳಸಿಕೊಂಡು ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಜಿಲ್ಲೆಯ ವ್ಯಾಪ್ತಿಯಲ್ಲಿ ಈಗಾಗಲೇ ಗುರುತಿಸಲಾಗಿರುವ ಸುಮಾರು 56 ಜಾಗಗಳಲ್ಲಿ ರೈತರ ಬಂಡೆಗಳನ್ನು ಆರ್ಟಿಫಿಶಿಯಲ್ ರೀಪ್ (ಕೃತಕ ಬಂಡೆ)ಗಳನ್ನು ಸಮುದ್ರಕ್ಕೆ ಹಾಕುವ ಕಾಮಗಾರಿಯ ಪ್ರಗತಿಯು ಯಾವ ಹಂತದಲ್ಲಿದೆ ವಿವರ ನೀಡುವುದು; | • ಕೇಂದ್ರ ಸರ್ಕಾರದ ಪ್ರಧಾನಮಂತ್ರಿ ಮತ್ಸ್ಯಸಂಪದ ಯೋಜನೆಯಡಿ (ರಾಜ್ಯದ ಪಾಲು ರೂ.694.40 ಲಕ್ಷಗಳು ಮತ್ತು ಕೇಂದ್ರದ ಪಾಲು ರೂ.1041.60 ಲಕ್ಷಗಳು) ಒಟ್ಟು 1736.00 ಲಕ್ಷಗಳಿಗೆ ಕರ್ನಾಟಕದ ಕರಾವಳಿಯಲ್ಲಿ 03 ಜಿಲ್ಲೆಗಳಲ್ಲಿ 56 ಸ್ಥಳಗಳಲ್ಲಿ ಕೃತಕ ಬಂಡೆಗಳನ್ನು (Artificial Reef) ಅಳವಡಿಸುವ ಯೋಜನೆಗೆ ಮಂಜೂರಾತಿ ನೀಡಲಾಗಿದೆ.<br>• ಸರ್ಕಾರವು ಕರ್ನಾಟಕ ಗ್ರಾಮೀಣ ಮೂಲ ಸೌಕರ್ಯ ಅಭಿವೃದ್ಧಿ ನಿಯಮಿತ ಸಂಸ್ಥೆಯನ್ನು ಅನುಷ್ಠಾನ ಏಜೆನ್ಸಿಯಾಗಿ ನೇಮಿಸಿದೆ.<br>• ರಾಜ್ಯದ 03 ಕರಾವಳಿ ಜಿಲ್ಲೆಗಳಲ್ಲಿ ಈಗಾಗಲೇ 56 ಸ್ಥಳಗಳನ್ನು ಗುರುತಿಸಲಾಗಿದೆ.<br>• CMFRI ಸಂಸ್ಥೆಯ ವಿಜ್ಞಾನಿಗಳು ಹಾಗೂ ಸ್ಥಳೀಯ ಅಧಿಕಾರಿಗಳೊಂದಿಗೆ 3 ಜಿಲ್ಲೆಗಳಲ್ಲಿ, ಪಾಲುದಾರರ ಮತ್ತು ಅಧಿಕಾರಿಗಳ ಸಭೆಗಳನ್ನು ನಡೆಸಿ, ಕಾರ್ಯಕ್ರಮದ ಅಗತ್ಯತೆ ಮತ್ತು ಅನುಕೂಲಗಳ ಬಗ್ಗೆ ಜಾಗೃತಿ ಮೂಡಿಸಲಾಗಿದೆ.<br>• ಕರ್ನಾಟಕ ಗ್ರಾಮೀಣ ಮೂಲ ಸೌಕರ್ಯ ಅಭಿವೃದ್ಧಿ ನಿಯಮಿತ ಇವರು 56 ಸ್ಥಳಗಳಿಗೆ ಅಂದಾಜು ಪಟ್ಟಿಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ.<br>• ಕೃತಕ ಬಂಡೆಗಳನ್ನು ನಿರ್ಮಿಸಿ ಅಳವಡಿಸುವ ಕಾರ್ಯ ಪ್ರಾರಂಭಿಸಬೇಕಾಗಿರುತ್ತದೆ. |

| | | |
|---|---|---|
| ಆ) | ಸದರಿ ನಿಗದಿತ ಪ್ರದೇಶದಲ್ಲಿ ಗಿಲ್ ನೆಟ್ ಟ್ರಾಲಿಂಗ್, ಚೌರಿಚಾರಿ ಫಿಶಿಂಗ್ ನಂತಹ ಆಕ್ರಮಣ ಕಾರಿಯಾದ ಮೀನುಗಾರಿಕೆಗೆ ಕಡಿವಾಣ ಬೀಳಲಿದ್ದು, ಮೀನು ಸಂತತಿ ಉಳಿಸುವ ನಿಟ್ಟಿನಲ್ಲಿ ಹಾಗೂ ಸದರಿ ಆರ್ಟಿಫಿಶಿಯಲ್ ರೀಫ್ (ಕೃತಕ ಬಂಡೆ) ಮೀನು ಸಂತಾನಾಭಿವೃದ್ಧಿಗೆ ಸಹಕಾರಿ ಯಾಗಲಿದೆ ಎಂದು ವೈಜ್ಞಾನಿಕವಾಗಿ ದೃಢಪಡಿಸಿರುವುದರಿಂದ ಸದರಿ ಈ ಯೋಜನೆಯನ್ನು ಸಮರ್ಪಕವಾಗಿ ಕಾರ್ಯಗತ ಗೊಳಿಸುವ ನಿಟ್ಟಿನಲ್ಲಿ ಸರ್ಕಾರವು ಕೈಗೊಂಡ ಕ್ರಮಗಳೇನು? | ಕೃತಕ ಬಂಡೆಯ ಉಪಯೋಗ ಹಾಗೂ ಇದರ ಸಾಧಕ-ಬಾಧಕಗಳ ಬಗ್ಗೆ ಅಧ್ಯಯನವನ್ನು CMFRI, ಕೊಚ್ಚಿನ್ ಅಧ್ಯಯನ ಮಾಡಿದೆ. ಇದಲ್ಲದೆ ಈ ವಿಧಾನವನ್ನು ಹಲವಾರು ವರ್ಷಗಳಿಂದ ತಮಿಳುನಾಡು ರಾಜ್ಯದಲ್ಲಿ ಪರಿಣಾಮಕಾರಿಯಾಗಿ ಅಳವಡಿಸಲಾಗಿದೆ. ಆದ್ದರಿಂದ, ಕೇಂದ್ರ ಸರ್ಕಾರ, ಮೀನುಗಾರಿಕೆ ಇಲಾಖೆಯು CMFRI, FSI ಸಂಸ್ಥೆಗಳ ಸಹಾಯದಿಂದ 03 ಕರಾವಳಿ ಜಿಲ್ಲೆಗಳಲ್ಲಿ ದಿನಾಂಕ: 11-09-2023 ರಿಂದ 16-09-2023 ರವರೆಗೆ ಸಮುದಾಯ ಆಧಾರಿತ ಪಾಲುದಾರರ ಸಭೆಗಳನ್ನು ನಡೆಸಿ ಕೃತಕ ಬಂಡೆಗಳ ಅಳವಡಿಕೆಯಿಂದ ಆಗುವ ಅನುಕೂಲಗಳ ಬಗ್ಗೆ ಮೀನುಗಾರರಿಗೆ ಅರಿವು ಮೂಡಿಸಲಾಗಿದೆ. |

ಸಂಖ್ಯೆ: ಪಸಂಮೀ ಇ-195 ಮೀಇಯೋ 2023

(ಮಂಕಾಳ ಎಸ್. ವೈದ್ಯ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು